५७

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	399
ಸದಸ್ಯರ ಹೆಸರು	ಡಾ|| ತೇಜಸ್ವಿನಿ ಗೌಡ
ಉತ್ತರಿಸುವ ದಿನಾಂಕ	15-12-2021
ಉತ್ತರಿಸುವವರು	ಮಾನ್ಯ ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸಿ' ಧರ್ಜೆಯ ಮುಜರಾಯಿ ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಕೋವಿಡ್‌ನಿಂದಾಗಿ ಆದಾಯವಿಲ್ಲದ ಅರ್ಚಕ ಸಮುದಾಯವು ಅತ್ಯಂತ ಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಕ್ರಮಗಳೇನು?	ಬಂದಿದೆ. ಸರ್ಕಾರದ ಆದೇಶದ ಸಂಖ್ಯೆ:ಕಂಇ 72 ಮುಅಬಿ 2021 ದಿನಾಂಕ:20-05-2021ರ ಆದೇಶಾನುಸಾರ ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವ 'ಸಿ' ದರ್ಜೆಯ ದೇವಾಲಯಗಳಲ್ಲಿ ಆರ್ಥಿಕವಾಗಿ ಸಂಕಷ್ಟ ದಲ್ಲಿರುವ ಅರ್ಚಕರು ಮತ್ತು ಸಿಬ್ಬಂದಿಗಳಿಗೆ ಆಯಾಯ ಜಿಲ್ಲೆಯ ಅನ್ನದಾಸೋಹ ನಡೆಸುವ 'ಎ' ಮತ್ತು 'ಬಿ' ದರ್ಜೆಯ ದೇವಾಲಯಗಳಲ್ಲಿ ಲಭ್ಯವಿರುವ ಅಕ್ಕಿ ಮತ್ತು ಇತರೆ ದವಸ ಧಾನ್ಯಗಳನ್ನು ಆಹಾರದ ಕಿಟ್‌ಗಳ ರೂಪದಲ್ಲಿ ತಯಾರಿಸಿ ನೀಡಲು ಸೂಚಿಸಿದೆ ಹಾಗೂ ಆಹಾರ ಧಾನ್ಯ ಲಭ್ಯವಿಲ್ಲದಿದ್ದಲ್ಲಿ ಅಥವಾ ಸಾಲದೇ ಇದ್ದಲ್ಲಿ 'ಸಿ' ದರ್ಜೆಯ ದೇವಾಲಯದ ಅರ್ಚಕರು ಮತ್ತು ಸಿಬ್ಬಂದಿಗಳಿಗೆ ಮಾತ್ರ ದೇವಾಲಯದ ನಿಧಿಯಿಂದ ವೆಚ್ಚ ಭರಿಸಿ ಆಹಾರದ ಕಿಟ್‌ಗಳನ್ನು ವಿತರಿಸಲು ಆದೇಶಿಸಿದೆ. ಸರ್ಕಾರದ ಆದೇಶದ ಸಂಖ್ಯೆ:ಕಂಇ 72 ಮುಅಬಿ 2021 ದಿನಾಂಕ:03-07-2021ರ ಆದೇಶದಲ್ಲಿ ಧಾರ್ಮಿಕ ದತ್ತಿ ಇಲಾಖೆಯ 'ಸಿ' ವರ್ಗದ ದೇವಾಲಯಗಳಲ್ಲಿ ಕೆಲಸ ಮಾಡುವ ಸುಮಾರು 36,047 ಅರ್ಚಕರು ಹಾಗೂ ಅಡುಗೆಭಟ್ಟರು ಮತ್ತಿತರರುಗಳಿಗೆ ತಲಾ ರೂ.3000.00ರಂತೆ ಒಟ್ಟು ರೂ1081.14ಲಕ್ಷಗಳನ್ನು ಬಿಡುಗಡೆ ಮಾಡಲು ಹಾಗೂ ಫಲಾನುಭವಿಗಳಿಗೆ ಖಜಾನೆ-2 ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಡಿ.ಬಿ.ಟಿ. ಮಾಡಲು ಅನುಮತಿ ನೀಡಲಾಗಿದೆ.
ಆ)	'ಸಿ' ದರ್ಜೆಯ ದೇವಸ್ಥಾನಗಳ ಅರ್ಚಕ ವೃಂದಕ್ಕೆ ಮಾಸಿಕ ಕನಿಷ್ಠ ವೇತನ ಜಾರಿಗೊಳಿಸುವ ಉದ್ದೇಶವಿದೆಯೇ; ಇದ್ದಲ್ಲಿ, ಯಾವಾಗ ನೀಡಲಾಗುತ್ತದೆ.	ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯಗಳಿಗೆ ಸಂಬಂಧಿಸಿದಂತೆ ತಸ್ತಿಕ್/ವರ್ಷಾಸನ ನಿಗಧಿಯಾಗಿರುವ ದೇವಾಲಯಗಳಿಗೆ ವೇತನವು ಸೇರಿದಂತೆ ಕನಿಷ್ಠ ವಾರ್ಷಿಕ ತಸ್ತಿಕ್/ವರ್ಷಾಸನ ರೂ.48,000.00ಗಳ ಭತ್ಯೆಯನ್ನು ಪ್ರಸ್ತುತ ಪಾವತಿಸಲಾಗುತ್ತಿದೆ. ಸದರಿ ಮೊತ್ತದಲ್ಲಿ ದೇವಾಲಯದ ದೈನಂದಿನ ಮತ್ತು ವಿಶೇಷ ಧಾರ್ಮಿಕ ಕಾರ್ಯಗಳಿಗೆ ಹಾಗೂ ಇತರೆ ವೆಚ್ಚಗಳನ್ನು ಭರಿಸಲಾಗುತ್ತದೆ. ತಸ್ತೀಕ್ ಮೊತ್ತದ ವೇತನವೂ ಸೇರಿರುವುದರಿಂದ ಅರ್ಚಕರಿಗೆ ಮಾಸಿಕ ಕನಿಷ್ಠ ವೇತನ ಜಾರಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

....2

ಇ)	ಇಕ್ಕೇರಿಯಲ್ಲಿ 'ಕೆಳದಿ' ಸಾಮ್ರಾಜ್ಯದ ರಾಜರು ನಿರ್ಮಿಸಿದ ಭವ್ಯ ಅಘೋರೇಶ್ವರ ದೇವಸ್ಥಾನದಲ್ಲಿನ 32 ಶಕ್ತಿ ದೇವತೆಗಳ ಆಯುಧ ದಾರಿ ಕೈಗಳನ್ನು ಅಘೋರೇಶ್ವರ ಮೂರ್ತಿಯು ಮೊಗಲರ ದಾಳಿಯಲ್ಲಿ ನಾಶವಾಗಿದ್ದು, ಇತಿಹಾಸ ನಂತರದಲ್ಲಿ ಸಣ್ಣ ಲಿಂಗವೊಂದಕ್ಕೆ ಪೂಜೆ ಸಲ್ಲಿಕೆಯಾಗುತ್ತಿದ್ದು, ಒಡಿದು ಹೋದ ಅಘೋರೇಶ್ವರ ಮೂರ್ತಿಯ ಪಾದ ದೇವಾಲಯದ ಹೊರಗೆ ಬಿದ್ದಿದ್ದು ಇದೀಗ ಸರ್ಕಾರವು ಮೊದಲಿನಂತಹ ಭವ್ಯವಾದ 32 ಕೈಗಳ ಅಘೋರೇಶ್ವರ ಮೂರ್ತಿ 6 1/2ಅಡಿ ಇದ್ದ ಮೂಲ ಮೂರ್ತಿಯಂತೆ ಹೊಸ ಮೂರ್ತಿಯನ್ನು ಕೆತ್ತನೆ ಪ್ರತಿಷ್ಠಾಪಿಸುವ ಯೋಚನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಪ್ರತಿಷ್ಠಾಪಿಸಲಾಗುತ್ತದೆ.	ಇಕ್ಕೇರಿಯಲ್ಲಿ ಕೆಳದಿ ಸಾಮ್ರಾಜ್ಯದ ರಾಜರು ನಿರ್ಮಿಸಿದ ಭವ್ಯ ಅಘೋರೇಶ್ವರ ದೇವಸ್ಥಾನವು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಧಾರ್ಮಿಕ ದತ್ತಿ ಇಲಾಖೆಯಿಂದ ದೇವರ ಪೂಜೆ ವಿಧಿ ವಿಧಾನ ಮತ್ತು ಧಾರ್ಮಿಕ ಕೈಂಕರ್ಯಗಳನ್ನು ಮಾತ್ರ ನಿರ್ವಹಿಸಲು ಅವಕಾಶವಿರುತ್ತದೆ. ಮೊದಲಿನಂತಹ ಭವ್ಯವಾದ 32 ಕೈಗಳ ಅಘೋರೇಶ್ವರ ಮೂರ್ತಿ 6 ½ ಅಡಿ ಇದ್ದ ಮೂಲ ಮೂರ್ತಿಯಂತೆ ಹೊಸ ಮೂರ್ತಿಯನ್ನು ಕೆತ್ತನೆ ಮಾಡಿ ಪ್ರತಿಷ್ಠಾಪಿಸುವ ಕುರಿತದಂತೆ ಬಗ್ಗೆ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಹಾಗೂ ಈ ಬಗ್ಗೆ ರಾಜ್ಯ ಪ್ರಾಚ್ಯವಸ್ತು ಇಲಾಖೆಯು ಕ್ರಮ ವಹಿಸಬೇಕಾಗಿರುತ್ತದೆ.
ಈ)	ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಬಳಿಯ ಪ್ರಸಿದ್ಧ ಜೈನ ಕ್ಷೇತ್ರ ಹುಂಚ'ದಲ್ಲಿನ ಪ್ರಾಚೀನವಾದ ಪಂಚ ತೀರ್ಥಂಕರ ಬಸದಿಯಲ್ಲಿ ಪೂಜೆಗೆ ಅವಕಾಶವಿಲ್ಲದೆ ಭಕ್ತರಿಗೆ ತೊಂದರೆಯಾಗಿರುವುದು ನಿಜವೇ; ಇಲ್ಲಿ ಯಾವಾಗಿನಿಂದ ಭಕ್ತರಿಗೆ ಪೂಜೆಗೆ ಅವಕಾಶ ಮಾಡಿ ಕೊಡಲಾಗುತ್ತದೆ.	ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಬಳಿಯ ಪ್ರಸಿದ್ಧ ಜೈನ ಕ್ಷೇತ್ರ 'ಹುಂಚ'ದಲ್ಲಿನ ಪ್ರಾಚೀನವಾದ ಪಂಚ ತೀರ್ಥಂಕರ ಬಸದಿಯು ಪುರಾತತ್ವ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ.
ಉ)	ಮುಜರಾಯಿ ದೇವಸ್ಥಾನಗಳಲ್ಲಿ ಹುಂಡಿಗೆ ಹಾಕುವ ಭಕ್ತರ ಕಾಣಿಕೆ ಹಣವನ್ನು ಎಷ್ಟು ಅವಧಿಗೆ ಒಮ್ಮೆ ತೆರೆದು ಲೆಕ್ಕ ಮಾಡಲಾಗುತ್ತಿದೆ; ತಣ್ಣನೆಯ ಹವೆಯ ಕಾರಣದಿಂದ ನೋಟುಗಳು ಮುಗ್ಗಲು (Fungus) ಬಂದು ಹಾಳಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ ಇದನ್ನು ತಡೆಯಲು ಸುರಕ್ಷಿತವಾದ ಹುಂಡಿ ಒದಗಿಸುವುದರ ಜೊತೆಗೆ ಅತಿ ಶೀಘ್ರವಾಗಿ ಹಣವನ್ನು ಹುಂಡಿಯಿಂದ ತೆರೆದು ಸರ್ಕಾರವು ಪಡೆಯಲು ಕ್ರಮ ವಹಿಸಲಾಗುವುದೇ;	ಮುಜರಾಯಿ ದೇವಸ್ಥಾನಗಳಲ್ಲಿ ಹುಂಡಿಗೆ ಹಾಕುವ ಭಕ್ತರ ಕಾಣಿಕೆ ಹಣವನ್ನು ತಿಂಗಳಿಗೊಮ್ಮೆ ಹುಂಡಿ ತೆರೆದು ಲೆಕ್ಕ ಮಾಡಿ ದೇವಾಲಯದ ನಿಧಿಗೆ ಜಮ ಮಾಡಲು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ:ಎಡಿಎಂ/1/ಸಿಆರ್/540/19-20, ದಿನಾಂಕ:14. 09. 2020ರ ಪತ್ರ ಮತ್ತು ಅದರ ಉಲ್ಲೇಖದಲ್ಲಿ ನಮೂದಿಸಲಾದ ಮಾರ್ಗಸೂಚಿ/ಸುತ್ತೋಲೆಗಳನ್ವಯ ಕ್ರಮ ವಹಿಸಲು ಸೂಚಿಸಲಾಗಿದೆ. ತಿಂಗಳಿಗೊಮ್ಮೆ ಹುಂಡಿ ತೆರೆದು ಲೆಕ್ಕ ಮಾಡಿ ದೇವಾಲಯದ ನಿಧಿಗೆ ಜಮ ಮಾಡಲು ಸೂಚಿಸಿರುವುದರಿಂದ ತಣ್ಣನೆಯ ಹವೆಯ ಕಾರಣದಿಂದ ನೋಟುಗಳು ಮುಗ್ಗಲು (Fungus) ಎಂದು ಹಾಳಾಗುತ್ತಿರುವ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ. ಅಧಿಸೂಚಿತ ದೇವಾಲಯಗಳಲ್ಲಿ ಸುರಕ್ಷತೆ ದೃಷ್ಟಿಯಿಂದ ಸುಭದ್ರವಾದ ಹುಂಡಿಗಳನ್ನು ಅಳವಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

....3

ಊ)	ನಿಯಮಾನುಸಾರ ಮುಜರಾಯಿ ಇಲಾಖೆಯು ಧಾರ್ಮಿಕ ಪರಿಷತ್ತಿನ ಸಭೆಯನ್ನು ಜಿಲ್ಲಾಧಿಕಾರಿಗಳು ನಿಯಮಿತವಾಗಿ ನಡೆಸುತ್ತಿದ್ದಾರೆಯೇ; ಎಷ್ಟು ಅವಧಿಗೊಮ್ಮೆ ಸಭೆ ಕರೆಯಬೇಕೆಂಬ ನಿಯಮವಿದೆ; ಸಭೆ ನಡೆಸದಿದ್ದಲ್ಲಿ ಕಾರಣಗಳೇನು; ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಗಡಿ ದೇವತೆ ಚೌಡೇಶ್ವರಿ ದೇವಸ್ಥಾನದಲ್ಲಿ ಹುಂಡಿ ತುಂಬಿ ಕಾಣಿಕೆ ಹಣ ಹೊರ ಬರುತ್ತಿರುವುದರಿಂದ ಕಳುವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಿಯಮಿತವಾಗಿ ಹಣ ತೆಗೆಯಲು ಕ್ರಮವಹಿಸಲಾಗುವುದೇ?	ಜಿಲ್ಲಾ ಧಾರ್ಮಿಕ ಪರಿಷತ್ ಸಭೆಯನ್ನು ಪ್ರತಿ ಮಾಹೆ 5ನೇ ತಾರಿಖಿನ ಒಳಗೆ ಕರೆಯಬೇಕೆಂದು ಧಾರ್ಮಿಕ ದತ್ತಿ ಆಯುಕ್ತರ ಸುತ್ತೋಲೆ ಸಂಖ್ಯೆ:ಎಡಿಎಂ-8/ಸಿಆರ್/147/2020-21 ದಿನಾಂಕ: 08-01-2020ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಕೋವಿಡ್-19ರ ಸಂಬಂಧ ಲಾಕ್‌ಡೌನ್ ಆದ ಅವಧಿಯನ್ನು ಹೊರತುಪಡಿಸಿ, ಹಾಸನ ಜಿಲ್ಲೆಯಲ್ಲಿ ಪ್ರತಿ ಮಾಹೆಯಲ್ಲಿ ಒಂದು ಸಭೆಯನ್ನು ನಡೆಸಲಾಗುತ್ತಿರುತ್ತದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಗಡಿ ದೇವತೆ ಚೌಡೇಶ್ವರಿ ದೇವಸ್ಥಾನದಲ್ಲಿ ಪ್ರತಿ ತಿಂಗಳಿಗೊಮ್ಮೆ ಹುಂಡಿ ತೆರೆದು ಸಂಗ್ರಹವಾದ ಮೊತ್ತವನ್ನು ದೇವಾಲಯದ ಉಳಿತಾಯ ಖಾತೆಗೆ ಜಮೆ ಮಾಡಲು ಕ್ರಮ ವಹಿಸಲಾಗುತ್ತಿರುವುದರಿಂದ, ಹುಂಡಿ ಹಣ ಕಳುವಾಗುವ ಸಂಭವ ಇರುವುದಿಲ್ಲ.

ಸಂಖ್ಯೆ: ಕಂಇ 237 ಮುಸಪ್ರ 2021

(ಶಶಿಕಲಾ. ಅ. ಜೊಲ್ಲೆ)

ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು